**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನಸಭೆ**
**ಒಂಭತ್ತನೇ ಅಧಿವೇಶನ**

# ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ (ತಿದ್ದುಪಡಿ) ವಿಧೇಯಕ, 2016
**(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ – 03)**

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ಅಧಿನಿಯಮ, 1994ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ಅಧಿನಿಯಮ, 1994ನ್ನು (1994ರ ಕರ್ನಾಟಕ ಅಧಿನಿಯಮ 31) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 3ನೇ ಪ್ರಕರಣದ ತಿದ್ದುಪಡಿ.–** ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ಅಧಿನಿಯಮ, 1994ರ (1994ರ ಕರ್ನಾಟಕ ಅಧಿನಿಯಮ 31) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3ನೇ ಪ್ರಕರಣದಲ್ಲಿ,–

(i) (2)ನೇ ಉಪಪ್ರಕರಣದ (ಎ) ಖಂಡದಲ್ಲಿ, "ಮತ್ತು ಸಿಖ್" ಎಂಬ ಪದಗಳಿಗೆ "ಸಿಖ್ ಮತ್ತು ಝೋರಾಸ್ಟ್ರಿಯನ್ (ಪಾರ್ಸಿ)" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಕೊನೆಯಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಅಂಥ ಸದಸ್ಯರ ಪೈಕಿ ಕನಿಷ್ಠ ಪಕ್ಷ ಒಬ್ಬರು ಮಹಿಳೆಯಾಗಿರತಕ್ಕದ್ದು."

**3. 10ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 10ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**10ಎ. ಆಯೋಗದ ಅಧಿಕಾರಗಳು.–** 10ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಹೇಳಿದ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ಆಯೋಗವು, ದಾವೆಯ ವಿಚಾರಣೆ ನಡೆಸುವ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು, ವಿಶೇಷವಾಗಿ, ಈ ಮುಂದಿನ ವಿಷಯಗಳ ಸಂಬಂಧದಲ್ಲಿ ಹೊಂದಿರತಕ್ಕದ್ದು, ಎಂದರೆ:–

(ಎ) ರಾಜ್ಯದ ಯಾವುದೇ ಭಾಗದ ಯಾವೊಬ್ಬ ವ್ಯಕ್ತಿಗೆ ಸಮನು ನೀಡುವುದು ಮತ್ತು ಹಾಜರಾತಿಯನ್ನು ಒತ್ತಾಯಪಡಿಸುವುದು ಹಾಗೂ ಪ್ರಮಾಣದ ಮೇಲೆ ಆತನನ್ನು ವಿಚಾರಣೆ ಮಾಡುವುದು;

(ಬಿ) ಯಾವುದೇ ದಸ್ತಾವೇಜನ್ನು ಹುಡುಕುವುದು ಮತ್ತು ಹಾಜರುಪಡಿಸುವುದನ್ನು ಅಗತ್ಯಪಡಿಸುವುದು;

(ಸಿ) ಅಫಿಡಾವಿತ್ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷ್ಯಗಳು ಮತ್ತು ದಸ್ತಾವೇಜುಗಳ ಪರಿಶೀಲನೆಗಾಗಿ ಆಜ್ಞಾಪನೆಗಳನ್ನು (ಕಮೀಷನ್) ಹೊರಡಿಸುವುದು; ಮತ್ತು

(ಎಫ್) ನಿಯಮಿಸಬಹುದಾದ ಯಾವುದೇ ಇತರ ವಿಷಯ."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ಅಧಿನಿಯಮ, 1994ನ್ನು,-

(i) ಆಯೋಗದ ರಚನೆಯಲ್ಲಿ ಅಲ್ಪಸಂಖ್ಯಾತ ಸಮುದಾಯವಾದ ಪಾರ್ಸಿಗಳ ಪ್ರಾತಿನಿಧ್ಯಕ್ಕಾಗಿ ಉಪಬಂಧ ಕಲ್ಪಿಸುವುದಕ್ಕೆ; ಮತ್ತು

(ii) ಆಯೋಗಕ್ಕೆ ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಪ್ರದಾನ ಮಾಡುವುದಕ್ಕೆ;

– ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತ ಜ್ಞಾಪನ ಪತ್ರ**

| | |
|---|---|
| ಖಂಡ 3 | 3ನೇ ಖಂಡದ (ಎಫ್) ಉಪಖಂಡವು, ಆಯೋಗವು ಚಲಾಯಿಸಬಹುದಾದ ಸಿವಿಲ್ ನ್ಯಾಯಾಲಯದ ಅಧಿಕಾರಗಳ ಸಂಬಂಧದಲ್ಲಿನ ಯಾವುದೇ ಇತರ ವಿಷಯವನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಖಮರ್‌ಉಲ್ ಇಸ್ಲಾಂ**
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ
ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ
ಮತ್ತು ವಕ್ಫ್ ಸಚಿವರು

**ಎಸ್. ಮೂರ್ತಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

**ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ಅಧಿನಿಯಮ, 1994ರ**

**(1994ರ ಕರ್ನಾಟಕ ಅಧಿನಿಯಮ 31) ಉದ್ಧೃತ ಭಾಗ**

XXX XXX XXX XXX XXX

**3. ಆಯೋಗದ ರಚನೆ.**– (1) XXX XXX XXX XXX XXX

(2) ಆಯೋಗವು ಈ ಕೆಳಗಿನವರನ್ನು ಹೊಂದಿರತಕ್ಕದ್ದು,–

(ಎ) ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ವ್ಯಕ್ತಿಯು ಅಧ್ಯಕ್ಷರಾಗಿರತಕ್ಕದ್ದು ಹಾಗೂ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದಿರುವ, ಅಲ್ಪಸಂಖ್ಯಾತ ಸಮುದಾಯದಿಂದ ಮತ್ತು ಕ್ರಿಶ್ಚಿಯನ್, ಜೈನ್, ಬೌದ್ಧ ಮತ್ತು ಸಿಖ್ ಈ ಪ್ರತಿಯೊಂದು ಸಮುದಾಯದಿಂದ ಒಬ್ಬರಿಗಿಂತ ಕಡಿಮೆ ಇಲ್ಲದಂತೆ ಇತರ ಎಂಟು ಸದಸ್ಯರನ್ನು ಹೊಂದಿರತಕ್ಕದ್ದು.

XXX XXX XXX XXX XXX

**10. ಆಯೋಗದ ಪ್ರಕಾರ್ಯಗಳು.**– (1) ಆಯೋಗದ ಪ್ರಕಾರ್ಯಗಳು ಈ ಮುಂದಿನಂತಿರತಕ್ಕದ್ದು:–

(ಎ) ಸಂವಿಧಾನದಲ್ಲಿ ಮತ್ತು ಅಲ್ಪಸಂಖ್ಯಾತ ವರ್ಗಗಳ ಸಂರಕ್ಷಣೆಗಾಗಿ ರಾಜ್ಯವಿಧಾನ ಮಂಡಲವು ಅಂಗೀಕರಿಸಿದ ಕಾನೂನುಗಳಲ್ಲಿ ಕಲ್ಪಿಸಲಾಗಿರುವ ವಿವಿಧ ರಕ್ಷಣಾ ಕ್ರಮಗಳ ಬಗ್ಗೆ ಕಾರ್ಯನಿರ್ವಹಣೆಯನ್ನು ಪರಿಶೀಲಿಸುವುದು;

(ಬಿ) ಎಲ್ಲಾ ರಕ್ಷಣಾ ಕ್ರಮಗಳ ಪರಿಣಾಮಕಾರಿಯಾದ ಅನುಷ್ಠಾನ ಮತ್ತು ಜಾರಿಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಶಿಫಾರಸು ಮಾಡುವುದು;

(ಸಿ) ಸಂವಿಧಾನದಲ್ಲಿ, ರಾಜ್ಯ ವಿಧಾನಮಂಡಲವು ಅಧಿನಿಯಮಿಸಿದ ಕಾನೂನುಗಳಲ್ಲಿ ಮತ್ತು ಅಲ್ಪ ಸಂಖ್ಯಾತ ವರ್ಗಗಳಿಗಾಗಿ ಸರ್ಕಾರದ ಕಾರ್ಯನೀತಿಗಳು ಮತ್ತು ಯೋಜನೆಗಳಲ್ಲಿ ಕಲ್ಪಿಸಲಾದ ರಕ್ಷಣಾ ಕ್ರಮಗಳ ಬಗೆಗಿನ ಕಾರ್ಯನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡುವುದು;

(ಡಿ) ಅಲ್ಪಸಂಖ್ಯಾತ ವರ್ಗಗಳ ಬಗೆಗಿನ ತಾರತಮ್ಯವನ್ನು ತಪ್ಪಿಸುವ ಪ್ರಶ್ನೆಯ ಸಂಬಂಧದಲ್ಲಿ ಅಧ್ಯಯನ, ಸಂಶೋಧನೆ ಮತ್ತು ವಿಶ್ಲೇಷಣೆ ಮಾಡುವುದು;

(ಇ) ಸರ್ಕಾರದ ಉದ್ದಿಮೆಗಳ, ಸರ್ಕಾರದ ಮತ್ತು ಅರೆ ಸರ್ಕಾರಿ ನಿಕಾಯ ಮುಂತಾದವುಗಳ ಸೇವೆಯಲ್ಲಿ ಅಲ್ಪಸಂಖ್ಯಾತ ವರ್ಗಗಳ ಪ್ರಾತಿನಿಧ್ಯವನ್ನು ವಾಸ್ತವಿಕವಾಗಿ ನಿರ್ಧರಿಸುವುದು ಮತ್ತು ಪ್ರಾತಿನಿಧ್ಯವು ಸಾಕಷ್ಟಿಲ್ಲದಿದ್ದ ಸಂದರ್ಭದಲ್ಲಿ, ಅಪೇಕ್ಷಿತ ಮಟ್ಟವನ್ನು ಸಾಧಿಸುವುದಕ್ಕಾಗಿ ಮಾರ್ಗೋಪಾಯಗಳನ್ನು ಸೂಚಿಸುವುದು;

(ಎಫ್) ರಾಜ್ಯದಲ್ಲಿ ಕೋಮು ಸಾಮರಸ್ಯವನ್ನು ಖಚಿತಪಡಿಸಿಕೊಳ್ಳಲು, ನಿರ್ವಹಿಸಲು ಮತ್ತು ಉತ್ತೇಜಿಸಲು ಶಿಫಾರಸುಗಳನ್ನು ಮಾಡುವುದು;

(ಜಿ) ಗೊತ್ತುಪಡಿಸಿದ ಅವಧಿಯಲ್ಲಿ ಸರ್ಕಾರಕ್ಕೆ ನಿಯತಕಾಲಿಕ ವರದಿಗಳನ್ನು ಸಲ್ಲಿಸುವುದು;

(ಹೆಚ್) ಅಲ್ಪಸಂಖ್ಯಾತ ವರ್ಗಗಳ ಕಲ್ಯಾಣ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಮುಖ್ಯವಾದುದೆಂದು ಆಯೋಗವು ಅಭಿಪ್ರಾಯಪಡುವ ಯಾವುದೇ ಇತರ ವಿಷಯದ ಬಗ್ಗೆ ಅಧ್ಯಯನ ನಡೆಸುವುದು ಮತ್ತು ಸೂಕ್ತ ಶಿಫಾರಸುಗಳನ್ನು ಮಾಡುವುದು;

(ಐ) ಅಲ್ಪಸಂಖ್ಯಾತ ವರ್ಗಗಳ ಕುಂದುಕೊರತೆಗಳನ್ನು ಪರಿಗಣಿಸುವುದು ಮತ್ತು ಕಾಲಕಾಲಕ್ಕೆ ಸೂಕ್ತ ಪರಿಹಾರವನ್ನು ಸೂಚಿಸುವುದು;

(ಜೆ) ಅಲ್ಪಸಂಖ್ಯಾತರ ಹಕ್ಕುಗಳ ಮತ್ತು ರಕ್ಷಣಾ ಕ್ರಮಗಳ ಬಗೆಗಿನ ವಂಚನೆಗೆ ಸಂಬಂಧಿಸಿದ ನಿರ್ದಿಷ್ಟ ದೂರುಗಳ ಬಗ್ಗೆ ಪರಿಶೀಲಿಸುವುದು ಮತ್ತು ಅಂಥ ವಿಷಯಗಳನ್ನು ಸೂಕ್ತ ಪ್ರಾಧಿಕಾರದ ಮುಂದೆ ತರುವುದು:

ಪರಂತು, (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯವನ್ನು ಅಲ್ಪಸಂಖ್ಯಾತ ವರ್ಗಗಳಿಗಾಗಿ ರಾಷ್ಟ್ರೀಯ ಆಯೋಗ ಅಧಿನಿಯಮ, 1992ರ (1992ರ ಕೇಂದ್ರಾಧಿನಿಯಮ 19) 3ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಅಲ್ಪಸಂಖ್ಯಾತ ವರ್ಗಗಳಿಗಾಗಿ ರಾಷ್ಟ್ರೀಯ ಆಯೋಗವು ವಹಿಸಿಕೊಂಡರೆ ರಾಜ್ಯ ಅಲ್ಪಸಂಖ್ಯಾತರ ಆಯೋಗವು ಅಂಥ ವಿಷಯಗಳ ಬಗ್ಗೆ ಅಧಿಕಾರ ವ್ಯಾಪ್ತಿ ಹೊಂದಿರುವುದು ನಿಂತು ಹೋಗತಕ್ಕದ್ದು.

(2) ಸರ್ಕಾರವು ಆಯೋಗದ ಶಿಫಾರಸುಗಳನ್ನು, ಶಿಫಾರಸುಗಳ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಕ್ರಮದ ಬಗೆಗಿನ ವಿವರಣೆ ಮತ್ತು ಅಂಥ ಯಾವುವೇ ಕ್ರಮಗಳನ್ನು ಒಪ್ಪಿಕೊಳ್ಳದಿರುವ ಬಗೆಗಿನ ಕಾರಣಗಳ ಸಹಿತವಾಗಿ, ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

XXX XXX XXX XXX XXX

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7. ಕಾಸೂ , 1000-ಪ್ರತಿಗಳು 2ನೇ ಮಾರ್ಚ್, 2016

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**NINTH SESSION**

# THE KARNATAKA STATE MINORITIES COMMISSION (AMENDMENT) BILL, 2016

**(L.A. Bill No. 03 of 2016)**

A Bill further to amend the Karnataka State Minorities Commission Act, 1994.

Whereas it is expedient further to amend the Karnataka State Minorities Commission Act, 1994 (Karnataka Act 31 of 1994) for the purposes hereinafter appearing;

Be it enacted by the Karnataka State Legislature in the Sixty-Seventh year of the Republic of India, as follows:-

***1. Short title and commencement.***- (1) This Act may be called the Karnataka State Minorities Commission (Amendment) Act, 2016.

(2) It shall come into force at once.

***2. Amendment of section 3.***- In the Karnataka State Minorities Commission Act, 1994 (Karnataka Act 31 of 1994), (hereinafter referred to as the Principal Act) in section 3,-

(i) in sub-section (2) , in clause (a), for the words "and Sikh community", the words "Sikh and Zorostrian (Parsis) community, " shall be substituted.

(ii) at the end the following proviso shall be inserted, namely,-

"provided that at least one such member shall be a woman."

***3. Amendment of section 10.-*** After Section 10 of the Principal Act, the following shall be inserted, namely:-

"***10A. Powers of the commission.-*** The commission shall, while performing any of the functions mentioned in sub-section (1) of section 10 have all the powers of a civil court trying a suit and in particular, in respect of the following matters, namely:-

(a) summoning and enforcing the attendance of any person from any part of State and examining him on oath;

(b) requiring the discovery and production of any document;

(c) receiving evidence on affidavits;

(d) requisitioning any public record or copy thereof from any court or office;

(e) issuing commissions for the examination of witnesses and documents; and

(f) any other matter as may be prescribed."

## *STATEMENT OF OBJECTS AND REASONS*

It is considered necessary to amend the Karnataka State Minorities Commission Act, 1994,-

(i) to provide for the representation of Parsis, a minority community in the constitution of the Commission; and

(ii) to confer powers of civil court to the Commission.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

## MEMORANDUM REGARDING DELEGATED LEGISLATION

| | |
|---|---|
| **Clause 3:** | Sub-clause (f) of clause 3, Empowers the State Government to prescribe by rules any other matter in respect of which the Commission can exercise powers of civil court. |

***QAMARUL ISLAM***
Minister for Municipalities, Local Bodies, Public Enterprises and Minorities Welfare and Wakf

**S. MURTHY**
Secretary (I/C)
Karnataka Legislative Assembly

## *ANNEXURE*

## *EXTRACT FROM THE KARNATAKA STATE MINORITIES COMMISSION ACT, 1994 (KARNATAKA ACT 31 OF 1994)*

***XX XX XX***

***3. Constitution of the Commission.-***

***XX XX XX***

(2) The Commission shall consist of,-

(a) the Chairman who shall be a person of a minority community and eight other members from the minority community holding a degree from a recognized university out of which not less than one each member shall be from Christian, Jain, Buddhist and Sikh community.

***XX XX XX***

***10. Functions of the Commission*** .- (1) The functions of the Commission shall be as follows :-

(a) to examine the working of various safeguards provided in the Constitution and in the laws passed by the State Legislature for the protection of minorities;

(b) to make recommendations with a view to ensuring effective implementation and enforcement of all the safeguards;

(c) to monitor the working of the safeguards provided in the constitution, laws enacted by the State Legislature and policies and schemes of the Government for minorities;

(d) to conduct studies, research and analysis on the questions of avoidance of discriminations against minorities;

(e) to make a factual assessment of the representation on minorities in the services of the Government undertakings, Government and quasi-Government bodies and in case representation is inadequate, to suggest ways and means to achieve the desired level;

(f) to make recommendations for ensuring, maintaining and promoting communal harmony in the State;

(g) to make periodical reports at prescribed intervals to the Government;

(h) to study any other matter which in the opinion of the Commission is important from the point of view of the welfare and development of minorities and to make appropriate recommendation;

(i) to consider the grievances of the minorities and to suggest appropriate solution from time to time;

(j) to look into specific complaints regarding deprivation of rights and safeguards of minorities and take up such matter with the appropriate authorities: Provided that if any matter specified in sub-section (1) is undertaken by the National Commission for Minorities constituted under section 3 of the National Commission for Minorities Act, 1992 (Central Act 19 of 1992), the State Commission for Minorities shall cease to have jurisdiction in such matters.

(2) The Government shall cause the recommedations of the Commission to be laid before each House of the State Legislature along with the memorandum explaining the action taken or proposed to be taken on the recommendations and the reasons for nonacceptance, of any such recommendations.

***XX*** ***XX*** ***XX***

Government Press, Vikasa Soudha, Bengaluru, P7, W.D., Copies 1000, 1st March, 2016